# ಅರಣ್ಯ ನ್ಯಾಯ!?

ಮನುಷ್ಯ ಕೇಂದ್ರಿತ ವಿಷಯಗಳನ್ನು ಮಾತನಾಡುವಾಗ 'ಅರಣ್ಯ ನ್ಯಾಯ'ದ ಪ್ರಸ್ತಾಪವಾಗುತ್ತದೆ. ಮನುಷ್ಯ ವಾಸಮಾಡುವ 'ಊರು' ಮುಖ್ಯವಾದಾಗ ಪ್ರಾಣಿಗಳು ವಾಸ ಮಾಡುವ ಅರಣ್ಯ ಮನುಷ್ಯನ ದೃಷ್ಟಿಯಲ್ಲಿ ಅಮುಖ್ಯವಾಗುತ್ತದೆ. ಮನುಷ್ಯನು ತನ್ನ ಬದುಕಿನ ಹಸನಿಗಾಗಿ ಮಾಡಿಕೊಂಡಿರುವ ನೀತಿ ನಿಯಮಗಳು, ರೀತಿ ರಿವಾಜುಗಳು ಶ್ರೇಷ್ಠವಾಗಿ ತೋರುತ್ತವೆ. ಅದಕ್ಕೆ ಸಮಾನಾಂತರವಾಗಿ ಈ ಭೂಮಿಯ ಮೇಲೆ ಮತ್ತು ಒಳಗೆ ಇರುವ ಅಸಂಖ್ಯಾತ ಜೀವ ಸಂಕುಲಗಳ ಬದುಕು ಮತ್ತು ಅವುಗಳ ಜೀವನ ನಿಯಮಾವಳಿಗಳು ನಮಗೆ ವಿಚಿತ್ರವಾಗಿಯೂ ಅಸಹಜವಾಗಿಯೂ ಅನೇಕ ಸಂದರ್ಭಗಳಲ್ಲಿ ಅಮಾನವೀಯವಾಗಿಯೂ ಕಾಣುತ್ತವೆ.

ಇದು ಸಹಜವೇ! ಏಕೆಂದರೆ ಮಾನವ ಸಂಕುಲಕ್ಕೆ ಹೊರತಾದ ಬದುಕನ್ನು ನಾವು ನೋಡುವುದು ಮತ್ತು ವ್ಯಾಖ್ಯಾನಿಸುವುದು ಮಾನವ ದೃಷ್ಟಿಯಿಂದಲೇ. ಆ ಬದುಕಿನಲ್ಲಿ ನಾವು ನಿರೀಕ್ಷಿಸುವುದು ನಮ್ಮ ಬದುಕಿನ ನಿಯಮಾವಳಿಗಳನ್ನೇ ಮತ್ತು ನೈತಿಕ-ಜೈವಿಕ ರೀತಿ ರಿವಾಜುಗಳನ್ನೇ. ಆ ಬದುಕನ್ನು ಅಳೆಯುವ, ಮೌಲ್ಯೀಕರಿಸುವ ದೃಷ್ಟಿಕೋನವು ಕೂಡ ಮಾನವ ನಿರ್ಮಿತ ಮಾನದಂಡಗಳನ್ನು ಅವಲಂಬಿತವಾಗಿರುತ್ತದೆ. ಆದುದರಿಂದ ಅರಣ್ಯದಲ್ಲಿ ಪ್ರಾಣಿಗಳ ಬದುಕು ನೈತಿಕ ನೆಲೆಯಲ್ಲಿಲ್ಲವೆಂಬಂತೆಯೂ, ಕ್ರೂರತೆಯಿಂದ ಕೂಡಿರುವಂತೆಯೂ ತೋರುತ್ತದೆ. ಪ್ರಾಣಿಗಳ ಬದುಕಿನಲ್ಲಿ ನಾವು ನಮ್ಮಲ್ಲಿರುವಂತಹ ತಾಯಿ-ಮಗ ತಂದೆ-ಮಗಳು ತರದ ಮನುಷ್ಯ ಸಂಬಂಧೀ ನೆಲೆಗಳನ್ನು ಹುಡುಕಿ-ಇಲ್ಲದಿರುವುದನ್ನು ಕಂಡು ನಿರಾಶರಾಗುತ್ತೇವೆ. ಮತ್ತು ಅಲ್ಲಿನ ನಿರ್ಭಿಡೆ ಸಂಬಂಧಗಳಿಗೆ ಅಸಹ್ಯಪಟ್ಟುಕೊಳ್ಳುತ್ತೇವೆ. 'ಛೇ, ಏನಿದು? ಇವುಗಳಲ್ಲಿ ಸಂಬಂಧಗಳಿಗೆ ಬೆಲೆಯೇ ಇಲ್ಲವಲ್ಲ! ತಂದೆ ಮಗಳ ಜೊತೆಯಲ್ಲಿ ಅಥವಾ ತಾಯಿ ಮಗನ ಜೊತೆ ಲೈಂಗಿಕ ಸಂಬಂಧಕ್ಕೆ ತೊಡಗುತ್ತವಲ್ಲ! ಸೋದರ ಸಂಬಂಧವೇ ಇಲ್ಲವಲ್ಲ! ಅವು ಜೈವಿಕವಾಗಿ ಬೆರೆಯುತ್ತವಲ್ಲ!' ಎಂದು ವ್ಯಾಖ್ಯಾನಿಸುತ್ತೇವೆ,

ಆದರೆ ಪ್ರಾಣಿ ಪ್ರಪಂಚದಲ್ಲಿ ಪ್ರತಿ ಸಂಕುಲಕ್ಕೂ ಅದರದೇ ಆದ ಜೀವನ ಶೈಲಿ ಮತ್ತು ನಿಯಮಾವಳಿಗಳಿರುತ್ತವೆ ಮತ್ತು ಅವುಗಳಿಗನುಗುಣವಾಗಿ ಅವು ಬದುಕುತ್ತಿರುತ್ತವೆ. ಅವು ಪ್ರಜ್ಞೆ ಮತ್ತು ಪ್ರವೃತ್ತಿಯ ಮಟ್ಟದಲ್ಲಿ ಬದುಕುತ್ತಿರುತ್ತವೆ. ಆ ಬದುಕು ನೈಸರ್ಗಿಕವಾಗಿರುತ್ತದೆ, ಸಹಜವಾಗಿರುತ್ತದೆ. ಬಿಸಿಲು ಮಳೆ ಗಾಳಿಗಳಂತೆ ಅಕೃತ್ರಿಮವಾಗಿರುತ್ತದೆ. ಮನುಷ್ಯನ ಬದುಕಿನ ರೀತಿ ಸಹಜತೆಯಿಂದ ಅಸಹಜತೆಯ ಕಡೆಗೆ ಕಟ್ಟಿಕೊಂಡ, ರೂಪಿಸಿಕೊಂಡ ನಿರ್ಮಿತಿಯಲ್ಲ. ಈ ಕಟ್ಟಿಕೊಂಡ ನಿರ್ಮಿತಿಯಿಂದಾಗಿಯೇ ಮನುಷ್ಯನ ಬದುಕು ಉಸಿರು ಸಿಕ್ಕಿಸಿಕೊಂಡಂತೆ ಸಂಕಟಪಡುತ್ತದೆ. ಅನೇಕ ಸಂದರ್ಭದಲ್ಲಿ ಉಸಿರು ಕಟ್ಟಿಸಿಕೊಂಡ ಬಂಧನದಿಂದ ಬಿಡಿಸಿಕೊಂಡು ನೈಸರ್ಗಿಕವಾಗಲು ಹೆಣಗುತ್ತದೆ. ಆ ರೀತಿ ಪ್ರಯತ್ನಿಸಿದಾಗಲೆಲ್ಲಾ, ಪ್ರಯತ್ನಿಸಿದ ಜೀವ ಅಥವಾ ಸಮೂಹ ವ್ಯವಸ್ಥೆಯ ಕಟ್ಟುಪಾಡನ್ನು ಮೀರಿದ ಪಾಪಕ್ಕೆ ಗುರಿಯಾಗುತ್ತದೆ; ವ್ಯವಸ್ಥೆಯ ಶಿಕ್ಷೆಗೆ ಗುರಿಯಾಗುತ್ತದೆ. ಆದರೂ ವ್ಯವಸ್ಥೆ ನಿರ್ಮಾಣ ಮಾಡಿದ ನೀತಿ ನಿಯಮಗಳನ್ನು ಮೀರುವ ಪ್ರಯತ್ನ ನಿಂತಿಲ್ಲ. ಅದು ಚಲನಶೀಲತೆಯ ಲಕ್ಷಣ; ಮನುಷ್ಯ ನೈಸರ್ಗಿಕ ನಿಯಮಗಳಿಗೆ ತೀರಾ ಹತ್ತಿರವಾದವನು ಎಂಬುದರ ಸೂಚಕ. ಅಂದರೆ ಮೂಲತಃ ಮನುಷ್ಯನು ಕೂಡ ಜೀವ ಜಗತ್ತಿನ ಒಂದಂಶ ಮಾತ್ರ ಎಂಬ ಸತ್ಯದ ದರ್ಶನವಾದಂತಾಯಿತು. ಈ ಸತ್ಯವನ್ನು ಅರ್ಥ ಮಾಡಿಕೊಳ್ಳದ ಮಾನವನು ಮಾತ್ರ ತಾನು ಇತರ ಜೀವಜಗತ್ತಿಗಿಂತ ಉತ್ತಮವೆಂದು ಬೀಗುತ್ತಾನೆ. ಇದು ಅಹಂಕಾರದ ಮತ್ತು ಅಜ್ಞಾನದ ಸಂಕೇತ ಮಾತ್ರ.

'ಅರಣ್ಯ ನ್ಯಾಯ'ವನ್ನು 'ಲಾ ಆಫ್ ದ ಜಂಗಲ್' ಎಂದು ಇಂಗ್ಲಿಷ್‌ನಲ್ಲಿ ಕರೆಯುತ್ತಾರೆ. 'ಅರಣ್ಯ ನ್ಯಾಯ'ವೆಂದರೆ ಯಾವುದೇ ನಿಯಮಗಳಿಲ್ಲದ, ಮಾನವೀಯತೆ ಇಲ್ಲದ, ಕ್ರೌರ್ಯ ತುಂಬಿದ ನ್ಯಾಯ ವ್ಯವಸ್ಥೆಯೆಂದು ಸಾಂಪ್ರದಾಯಿಕ ಅರ್ಥ ತಿಳಿಸುತ್ತದೆ. ಬಲಾಢ್ಯತೆಯ ಬದುಕು; ಶಕ್ತಿ ಇದ್ದವ ಬದುಕುತ್ತಾನೆ. ಕಾಡಿನಲ್ಲಿ ಹುಲಿ ಸಿಂಹ ಚಿರತೆಗಳಂತ ಬಲಾಢ್ಯ ಮಾಂಸಹಾರಿ ಪ್ರಾಣಿಗಳು ದುರ್ಬಲ ಸಸ್ಯಹಾರಿ ಪ್ರಾಣಿಗಳನ್ನು ಹಿಡಿದು ತಿನ್ನುತ್ತವೆ. ಇದು ತಪ್ಪು, ಮನುಷ್ಯ ಜಗತ್ತಿನಂತೆ ಸಬಲ ದುರ್ಬಲರೆಲ್ಲರೂ ಸಹಬಾಳ್ವೆ ನಡೆಸಬೇಕು, ಪ್ರೀತಿ ಸ್ನೇಹ ಸಂಬಂಧವಿರಬೇಕು. ಅದುವೇ ಜೀವನ ಎಂಬಂಥ ಕಲ್ಪನೆಯಿದೆ. ಈ ಕಲ್ಪನೆ, ಮಾನವ ಆದರ್ಶ ಅರಣ್ಯಬದುಕಿನಲ್ಲಿ ಜಾರಿಗೆ ಬಂದರೆ ಆಗುವ ಅನಾಹುತವನ್ನು ಕಲ್ಪಿಸಿಕೊಳ್ಳಿ. ಹುಲಿ, ಸಿಂಹ, ಚಿರತೆ ಮುಂತಾದ ಪ್ರಾಣಿಗಳೆಲ್ಲವೂ ಹಸಿವೆಯಿಂದ ಬಳಲಿ ಪ್ರಾಣ ನೀಗಬೇಕಾಗುತ್ತದೆ. ನೈಸರ್ಗಿಕ ಸಮತೋಲನ ತಪ್ಪಿ ಸಸ್ಯಹಾರಿ ಪ್ರಾಣಿಗಳು ಅಪಾರ ಸಂಖ್ಯೆಯಲ್ಲಿ ಅಧಿಕಗೊಂಡು ಆಹಾರವಿಲ್ಲದೆ ನರಳಿ ಸಾಯಬೇಕಾಗುತ್ತದೆ. ಜಗತ್ತಿನ ಅನೇಕ ಜೀವ ಸಂಕುಲಗಳು ಆಹಾರ ಸರಪಳಿಯ ಕೊಂಡಿಯ ಕುಣಿಕೆಯಿಂದ ತಪ್ಪಿಸಿಕೊಂಡು ಕಣ್ಮರೆಯಾಗಬೇಕಾಗುತ್ತದೆ. ಆದುದರಿಂದ ಪ್ರಕೃತಿ ಧರ್ಮದಂತೆ ಜೀವನ ಕ್ರಮ ಸಾಗುವುದು ಉತ್ತಮ. ಪ್ರಕೃತಿಯ ಮಡಿಲಲ್ಲಿ ಪ್ರತಿಯೊಂದು ಜೀವ ಸಂಕುಲಕ್ಕೂ ಬದುಕುವ ಸವಾಲುಗಳು ಕರಗತವಾಗಿರುತ್ತವೆ. ಆ ಸವಾಲುಗಳನ್ನು ಸ್ವೀಕರಿಸಿ ನಿಂತಾಗ ಮಾತ್ರ ಅವುಗಳ ಅಸ್ತಿತ್ವ ಚಲನೆಯಲ್ಲಿರುತ್ತದೆ.

**-ಶಿಕಾಕು**

## ಮಾತೇ ಮುತ್ತು

★ ಯುದ್ಧ ಕೆಟ್ಟವನನ್ನು ನಾಶ ಮಾಡುವುದಿಲ್ಲ; ಒಳ್ಳೆಯವನನ್ನು ಸದಾ ನಾಶ ಮಾಡುತ್ತದೆ.
-ಸಾಫೊಕ್ಲಿಸ್

★ ಒಳ್ಳೆಯದಲ್ಲದ ಶಾಂತಿ, ಒಳ್ಳೆಯದಾದ ಯುದ್ಧ ಎಂದೂ ಇರಲಿಲ್ಲ.
-ಬೆಂಜಮಿನ್ ಫ್ರಾಂಕ್ಲಿನ್

★ ಒಂದು ಯುದ್ಧದ ಅಂತ್ಯಕ್ಕಿಂತ ಎಲ್ಲ ಯುದ್ಧಗಳ ಅಂತ್ಯ ನಮಗೆ ಬೇಕು.
-ರೂಸ್‌ವೆಲ್ಟ್

★ ಒಬ್ಬನ ಯೋಗ್ಯತೆಯನ್ನು ಅವನು ಯಾರೊಡನೆಯಾದರೂ ಜಗಳವಾಡುವಾಗಿನ ನಡೆಯನ್ನು ನೋಡಿ ತೀರ್ಮಾನಿಸಬಹುದು.
-ಜಾರ್ಜ್ ಬರ್ನಾರ್ಡ್ ಶಾ

★ ಮನುಷ್ಯನ ಯೋಗ್ಯತೆಯನ್ನು ಅವನ ನಡತೆಯಿಂದ ತಿಳಿಯಲಾಗುವಂತೆ, ಬೇರೆ ಯಾವುದರಿಂದಲೂ ತಿಳಿಯಲಾಗುವುದಿಲ್ಲ.
-ಸ್ಪೆನ್ಸರ್

★ ಯುದ್ಧ ಎಂದರೆ ಏನು ಎಂದು ತಿಳಿಯದವನು ಯುದ್ಧಕ್ಕೆ ಹೋಗಲಿ!
-ಸ್ಪಾನಿಷ್ ಗಾದೆ

★ ನಾನು ಯೋಚಿಸುತ್ತೇನೆ; ಆದ್ದರಿಂದ ನಾನು ಇದ್ದೇನೆ.
-ಡೆಸ್ಕಾರ್ಟೆಸ್

★ ಸಾಮಾಜಿಕ ಸಂಸ್ಥೆಗಳನ್ನು ಪೋಷಿಸಲು ಕಾನೂನೊಂದೇ ಸಾಲದು. ಅವುಗಳಲ್ಲಿ ಧಾರ್ಮಿಕ ಅನುಮೋದನೆ ಮತ್ತು ಸಾಮಾಜಿಕ ಅನುಮೋದನೆ ಅತ್ಯಂತ ಮುಖ್ಯವಾದವು.
-ಬಿ.ಆರ್.ಅಂಬೇಡ್ಕರ್

★ ನಮ್ಮ ಆಲೋಚನೆಗಳೇ ನಮ್ಮನ್ನು ರೂಪಿಸುತ್ತವೆ. ಆದ್ದರಿಂದ ಏನನ್ನು ಯೋಚಿಸುತ್ತೀರೋ ಅದರ ಬಗ್ಗೆ ಎಚ್ಚರದಿಂದಿರಿ.
-ಸ್ವಾಮಿ ವಿವೇಕಾನಂದ

★ ಬಾಳ ವಿಚಾರ ಮಾಡಿದರ ಮನುಷ್ಯ ಬಗರಿ ಸುತ್ತು ಹಾಕಿದಾಂಗ ಅಲ್ಲೇ ಸುತ್ತು ಹಾಕತಾನ. ಅಲ್ಲೇ ತಗ್ಗು ಬೀಳತದ. ಪ್ರಗತೀನ ಆಗೂದಿಲ್ಲ.
-ವಿ.ವಾ.ಶಿರವಾಡಕರ

★ ಯೌವನ, ಧನಸಂಪತ್ತು, ಅಧಿಕಾರ, ಅವಿವೇಕ- ಇವು ಒಂದೊಂದೇ ಅನರ್ಥಕ್ಕೆ ಸಾಕು. ನಾಲ್ಕೂ ಸೇರಿದರೆ ಕೇಳಬೇಕೆ?
-ಹಿತೋಪದೇಶ

★ ರಾಜಕಾರಣಿ ನೀತಿಕೋವಿದನಾಗಿರುವುದು ಸಾಧ್ಯವಿಲ್ಲ!
-ವಿಲ್ ಡ್ಯೂರೆಂಟ್

★ ಒಬ್ಬ ನಾಗರಿಕ ತನ್ನ ಕಾಲಮೇಲೆ ತಾನು ನಿಲ್ಲುವಂತೆ ಮಾಡುವುದೇ ನಿಜವಾದ ರಾಜಕೀಯ.
-ಸ್ವಾಮಿ ರಂಗನಾಥಾನಂದ

★ ಅಳದ ಯುವಕ ಅನಾಗರಿಕ, ನಗದ ಮುದುಕ ದಡ್ಡ.
-ಸಂತಯನ